ದಿಢೀರನೆ ಚಳಿ ಎನ್ನಿಸಿ ಕಾಲಡಿಯಿದ್ದ ಉಣ್ಣೆಯ ರಗ್ ಎಳೆದುಕೊಂಡೆ. ನಿದ್ದೆ ಹತ್ತಲಿಲ್ಲ. ಅವನ ಹೆಸರೇನಿರಬಹುದು? ಕನ್ನಡದ 'ಅ' ಸ್ವರದಿಂದ ಮೊದಲಿಟ್ಟು 'ಊ' ತನಕ... ನಂತರ ವ್ಯಂಜನಗಳಿಗೆ ಕಾಗುಣಿತ ಹಚ್ಚಿ ಅರಸತೊಡಗಿದೆ – ಕ ಕಾ ಕಿ ಕೀ, ಗ ಗಾ ಗಿ ಗೀ, ಚ ಚಾ, ರ,ರಾ... ಅರಸುತ್ತಲೇ ನಿದ್ದೆಗೆ ಜಾರಿದ್ದೆ. ಬೆಳಗ್ಗೆ ಐದಕ್ಕೇ ಅಡುಗೆಯವರು ಪ್ರತಿ ರೂಮಿನ ಬಳಿ ಕಾಫಿ ಜಗ್ ತಂದಾಗ, 'ಸರ್ ಕಾಫಿ ಕುಡಿದುಬಿಡಿ, ಆಮೇಲೆ ಸ್ನಾನ ಮಾಡಿದರಾಯ್ತು' ಎಂದು ರೂಮಿಗೆ ಬಂದ ವಾಸು ಹೇಳಿದಾಗ ಹೊದಿಕೆ ಸರಿಸಿದೆ. 'ಸೊಳ್ಳೆ ಇಲ್ಲ ಅಲ್ವಾ ಸರ್.' 'ಇಲ್ಲ ಒಳ್ಳೇ ನಿದ್ದೆ ಸ್ವಲ್ಪ ಚಳಿ ಅನ್ನಿಸಿತು ಅಷ್ಟೇ' ಎಂದು ಬಿಸಿ ಬಿಸಿ ಕಾಫಿ ಹೀರತೊಡಗಿದೆ. 'ಕಲ್ಯಾಣ ರಾಮ' ಥಟ್ಟನೆ ಹೊಡೆದಂತಾಯ್ತು. ಹಾಂ, ಅವನು, ನಾನು ನೋಡಿದ ಆ ಮುಖ ಕಲ್ಯಾಣನದ್ದೇ. ಅದೇ ಮುಖ, ಬಲಗೆನ್ನೆಯ ಗುಳಿ, ಸ್ವಲ್ಪ ನಾಚಿಕೆ ಸ್ವಭಾವದ ಕಲ್ಯಾಣಿ ಎಂದು ರೇಗಿಸುತ್ತಿದ್ದರಲ್ಲ? ಅವನಿಗೆ ನನ್ನ ಗುರುತು ಸಿಗಲಿಲ್ಲವೇ? ಯಾವುದಕ್ಕೂ ವಾಸುವನ್ನು ಕೇಳಿಬಿಡಬೇಕು.

ಮತ್ತೆ ತಿಂಡಿಗೆ ಡೈನಿಂಗ್ ಹಾಲ್‌ನಲ್ಲಿ ಅವನ ದರ್ಶನವಾಯಿತು. ನನ್ನಿಂದ ಎರಡನೇ ಆಸನದಲ್ಲಿ ಅವನು ಕೂತಿದ್ದ! ನೇರ ಕೇಳಿಯೇ ಬಿಟ್ಟೆ: 'ಬೈ ಎನಿ ಚಾನ್ಸ್ ನಿಮ್ಮ ಹೆಸರು ಕಲ್ಯಾಣ ರಾಮ?' ನನ್ನ ಪ್ರಶ್ನೆ ಮುಗಿಯುವಷ್ಟರಲ್ಲೇ ಅವನು ಜಾಗ ಖಾಲಿ ಮಾಡಿದ್ದ. ಅವಮಾನವಾದಂತಾಗಿ ತಲೆ ತಗ್ಗಿಸಿದೆ. ನನ್ನ ಪಕ್ಕದಲ್ಲಿ ಕುಳಿತಿದ್ದ ಈಶ್ವರ್ ಅದನ್ನು ಗಮನಿಸಿದರೇನೋ – 'ನಾನು ವಿಚಾರಿಸ್ತೀನಿ ಸರ್' ಎಂದರು.

ಧಾರೆಗೆ ಎಲ್ಲರೂ ಒಂದೇ ಕಡೆ ಕುಳಿತಿದ್ದೆವು. ನನ್ನ ಮನಸೆಲ್ಲ ಕಲ್ಯಾಣಿಯೇ ತುಂಬಿದ್ದ.

★★★

ಪ್ರೌಢ ಶಾಲೆಯಲ್ಲಿ ನನ್ನ ಕಲಿಕೆ ಒಮ್ಮಿಂದೊಮ್ಮೆಗೆ ಕನ್ನಡದಿಂದ ಆಂಗ್ಲ ಮಾಧ್ಯಮಕ್ಕೆ ಬದಲಾದಾಗ ಎಲ್ಲವೂ ಅಯೋಮಯವಾಗಿತ್ತು. ಏನೂ ಅರ್ಥವಾಗದು. ಟೆಸ್ಟ್‌ಗಳಲ್ಲಿ ಎರಡು ಮೂರು ವಿಷಯಗಳ ಅಂಕಗಳ ಅಡಿ ಕೆಂಪು ಗೆರೆ ಕಾಣಿಸುತ್ತಿದ್ದವು. ಅರ್ಥಾತ್ ನಪಾಸು. ಇಲ್ಲಿ ಶುರುವಾಗಿತ್ತು ಕೆಲವು ಗುರುಗಳು ಸಹ್ಯ; ಉಳಿದವರು ಅಷ್ಟಕ್ಕಷ್ಟೇ ಎಂಬುದು. ಅಂತೂ ನಿಲ್ಲದೇ ಹತ್ತನೆಯ ತರಗತಿಗೆ ಬಂದಾಗಿತ್ತು. ಹೈಸ್ಕೂಲ್ ಕಡೆಯ ವರ್ಷ ಹದಿಹರೆಯದ ವಯಸ್ಸು. ಪತ್ರಿಕೆಗಳಲ್ಲಿ ಬರುವ ಧಾರಾವಾಹಿಗಳನ್ನು 'ದೊಡ್ಡವರು ಮಾತ್ರ ಓದಬೇಕು' ಎಂಬ ಕಟ್ಟುಪಾಡು. ನನ್ನ ಅಕ್ಕ ಓದುವಾಗ ನಾನೇಕೆ ಓದಬಾರದು ಎಂಬ ಕೋಪ, ಅಸಹನೆ. ಆದರೆ ಮೀರುವ ಧೈರ್ಯವಿಲ್ಲ. ರೋಮ್ಯಾನ್ಸ್ ಅರ್ಥವಾಗದಿದ್ದರೂ ಲೋಕವೇ ರೋಮ್ಯಾಂಟಿಕ್ ಆಗಿ ಕಾಣುವ ಎಳೆ ಪ್ರಾಯ. 'ಅವನು ಇವಳ ಫ್ರೆಂಡ್, ಇವನು ಅವಳ ಫ್ರೆಂಡ್' ಅಂತೆಲ್ಲ ಗುಸುಪಿಸುಗಳ ಹುಚ್ಚಾಟದ ವಯಸ್ಸು. ಗೆಳೆಯರಲ್ಲೂ ಗುಂಪುಗಾರಿಕೆ. 'ನನಗೆ ಎಲ್ಲಾ ತಿಳಿದಿದೆ' ಎನ್ನುವ ರೀತಿಯಲ್ಲಿ ನ್ಯಾಯ ನಿರ್ಣಯಗಳನ್ನು ಕೊಡುವಷ್ಟು ಅಹಂ. ಕಲ್ಯಾಣಿಯನ್ನು ನಮ್ಮ ಮನೆಗೆ ವಾರಾನ್ನದ ಹುಡುಗನಾಗಿ ಪರಿಚಯಿಸಿದ್ದೇ ಮೂರ್ತಿ ಮಾವ. ಅವರು ನಮ್ಮ ಬಡಾವಣೆಯಲ್ಲೇ ಇದ್ದವರು. 'ಹುಡುಗನಿಗೆ ರೂಮ್ ವ್ಯವಸ್ಥೆಯಾಗಿದೆ. ಊಟಕ್ಕೆ ನಾಲ್ಕೈದು ಮನೆ ಏರ್ಪಾಡು ಮಾಡಿದ್ದೀನಿ – ಬುಧವಾರ ರಾತ್ರಿ ಮತ್ತು ಭಾನುವಾರ ಮಧ್ಯಾಹ್ನ ನಿಮ್ಮ ಮನೆಯಲ್ಲಿ. ನಿನಗೆ ಅಡ್ಡಿಯಿಲ್ಲವಲ್ಲ?' ಎಂದು ಅಮ್ಮನನ್ನು ಉದ್ದೇಶಿಸಿ ಹೇಳಿದಾಗ ಇಲ್ಲವೆನ್ನಲಾಗದೇ ಒಪ್ಪಿಕೊಂಡಿದ್ದಳು. 'ನಮ್ಮವರಿಗೆ ನಾವೇ ಸಹಾಯ ಮಾಡದಿದ್ದರೆ ಹೇಗೆ ಅಲ್ವೇ ಶಾಮೂ?' ಎಂದು ಅಪ್ಪನ ಕಡೆ ನೋಡಿದಾಗ, 'ಹೌದು ಭಾವ, ನೀವು ಹೇಳೋದರಲ್ಲೂ ಅರ್ಥವಿದೆ' ಎಂದಿದ್ದರು. ಕಲ್ಯಾಣಿ ಬಿ.ಎಸ್ಸಿ ಎರಡನೇ ವರ್ಷದಲ್ಲಿದ್ದ. ಊಟಕ್ಕೆ ಸ್ವಲ್ಪ ಮೊದಲೇ